# <u>ಮಂತ್ರ ದೊರಕಿತು ನಾಮ ಮಂತ್ರ</u>

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Note:** The same wordings are followed by the singer.

ರಾಗ: ಪಂತುವರಾಳಿ ತಾಳ: ಛಾಪು

ಮಂತ್ರ ದೊರಕಿತು ನಾಮ ಮಂತ್ರ ದೊರಕಿತು ॥ ಪ ॥

ಯಂತ್ರ ವಾಹಕ ನಾರಾಯಣನ
ಅಂತರಂಗದಿ ಜಪಿಸುವಂಥ ॥ ಅಪ ॥

ಆಶೆಯಲ್ಲಿ ಬೀಳಲಿಲ್ಲ ಕ್ಲೇಶಪಟ್ಟು ಬಳಲಲಿಲ್ಲ
ವಾಸುದೇವ ಕೃಷ್ಣನೆಂಬ ಶಾಶ್ವತದೀ ದಿವ್ಯ ನಾಮ ॥ 1 ॥

ಅರ್ಥ ವೆಚ್ಚವಾಗಲಿಲ್ಲ, ಕಷ್ಟಪಟ್ಟು ಬಳಲಲಿಲ್ಲ
ಭಕ್ತಿಯಿಂದ ಭಜಿಸಿ ಮಹಾಮುಕ್ತಿ ಪದವ ಸೇರುವಂಥ ॥ 2 ॥

ಹೊದ್ದಿದ ಪಾಪವೆಲ್ಲ ಕಳೆದು, ಉದ್ಧಾರವಾಯಿತು ಕುಲಕೋಟಿಯು
ಮುದ್ದು ಕೃಷ್ಣನ ದಿವ್ಯ ನಾಮ ವಜ್ರ ಕವಚ ಹೃದಯದಲ್ಲಿ ॥ 3 ॥

ಹಾಸ ಬಹುದು ಹೊದೆಯ ಬಹುದು, ಸೂಸಿ ಒಡಲ ತುಂಬ ಬಹುದು
ದಾಸರನ್ನು ಬಿಡದೆ ಪೊರೆವ ಶ್ರೀಶನೆಂಬ ದಿವ್ಯ ನಾಮ ॥ 4 ॥

ಒಂದು ಬಾರಿ ಸ್ತುತಿಸಿದರೆ ಒಂದು ಕೋಟಿ ಜಪದ ಫಲವು
ಇಂದಿರೇಶ ಶ್ರೀ ಪುರಂದರ ವಿಠಲನೆಂಬ ದಿವ್ಯ ನಾಮ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹರಿನಾಮ ಮಂತ್ರವು ಕೇವಲ ಭಕ್ತಿ ಯೊಂದರಿಂದಲೆ ಸಾಧಿಸುವಂತಹದು. ಇದರ ಆದರ್ಶ ಪರಮಾತ್ಮನ ಸಾಕ್ಷಾತ್ಕಾರ. ಸಾಮಾನ್ಯವಾಗಿ ಈ ನಾಮ ಮಂತ್ರ ವೊಂದನ್ನು ಬಿಟ್ಟರೆ ಮಂತ್ರ ಸಿದ್ಧಿಯನ್ನು ಬಯಸುವವರು ಯಾವುದಾದಒಂದು ಭೌತಿಕ ಕಾಮನೆಗಾಗಿ ಅದನ್ನು ಬಳಸುವರು. ಯಾವ ಕಾಮನೆಯೂ ಭಕ್ತನಿಗಿಲ್ಲವೆಂಬ ಮಾತನ್ನು ದಾಸರು ಇಲ್ಲಿ ಹೇಳಿದ್ದಾರೆ.

**ಯಂತ್ರವಾಹಕ** = ಜಗತ್ ಸೂತ್ರಧಾರಿ

**Classification:** Keerthane
**Ankita:** sri purandara vittala
**Location:** NA
**Category:** Vishnu Stuti, Krishna Stuti
**Group Words:** Vishnu, Krishna, paramatma, mantra, japa, divya, rokka, mukti, papa, hrudaya, vajra, phala
**Pravachana:** NA
**Explanation:** NA